RNU AIR DHARWAD

# SEPTEMBER 23, 2025
# AKASHAVANI - DHARWAD
# PRADESH SAMACHARA (KANNADA) 12 PM

<><><>

‘ಜನರಿಗಾಗಿ ಮತ್ತು ಭೂ ಗ್ರಹಕ್ಕಾಗಿ ಆಯುರ್ವೇದ’, ಧ್ಯೇಯದೊಂದಿಗೆ, ಇಂದು 10 ನೇ ರಾಷ್ಟ್ರೀಯ ಆಯುರ್ವೇದ ದಿನವನ್ನು ಆಚರಿಸಲಾಗುತ್ತಿದೆ. ಕೇಂದ್ರ ಆಯುಷ್ ಇಲಾಖೆ, ಈ ವರ್ಷದಿಂದ ಜಾರಿಗೆ ಬರುವಂತೆ, ಇಂದು ಆಯುರ್ವೇದ ದಿನಾಚರಣೆಯನ್ನು ಆಚರಿಸಲು ನಿರ್ಧರಿಸಿದೆ. ಆಯುರ್ವೇದ ವೈದ್ಯ ಪದ್ಧತಿಯ ಪ್ರಾಮುಖ್ಯತೆ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ ಧಾರವಾಡದ ಎಸ್.ಡಿ.ಎಂ ಆಸ್ಪತ್ರೆಯ ತಜ್ಞ ವೈದ್ಯರಾದ ಡಾಕ್ಟರ ಕಾರ್ತಿಕ ಪ್ರಸಾದ ಹೊಂಗಲ್.

<><><>

ಧ್ವನಿ– ಡಾ.ಕಾರ್ತಿಕ ಹೊಂಗಲ್ (36 ಸೆಕೆಂದುಗಳು)

<><><>

ವಿಶ್ವವಿಖ್ಯಾತ ನಾಡ ಹಬ್ಬ ದಸರಾ ಮಹೋತ್ಸವದಲ್ಲಿ ಮಹಿಳೆಯರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಇಂದು ಬೆಳಗ್ಗೆ ಅರಮನೆ ಅವರಣದಲ್ಲಿ ದಸರಾ ರಂಗೋಲಿ ಸ್ಪರ್ಧೆಗೆ ಚಾಲನೆ ನೀಡಲಾಯಿತು. ಮಹಿಳಾ ದಸರಾ ಉಪ ಸಮಿತಿ ವತಿಯಿಂದ ಆಯೋಜಿಸಿದ್ದ ರಂಗೋಲಿ ಸ್ಪರ್ಧೆ ಕಾರ್ಯಕ್ರಮಕ್ಕೆ ಸ್ಥಳೀಯ ಶಾಸಕ ಶ್ರೀವತ್ಸ ಚಾಲನೆ ನೀಡಿ, ಮಾತನಾಡಿ ವಿಶ್ವ ವಿಖ್ಯಾತ ದಸರ ಮಹೋತ್ಸದಲ್ಲಿ ಮಹಿಳೆಯರಿಗೂ ಆದ್ಯತೆ ನೀಡುವ ಹಿನ್ನೆಲೆಯಲ್ಲಿ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದೆ. ಮಹಿಳೆಯರಲ್ಲಿನ ಕಲೆಗಳ ಪ್ರದರ್ಶನದ ಜೊತೆಗೆ ನಾಡಿನ ಸಾಂಸ್ಕೃತಿಯನ್ನು ಉಳಿಸಿ ಬೆಳೆಸಲು ಈ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎಂದು ತಿಳಿಸಿದರು.

<><><>

ನಾಡಿನಾದ್ಯಂತ ನವರಾತ್ರಿ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ, ಆಚರಿಸಲಾಗುತ್ತಿದೆ. ಶರನ್ನವರಾತ್ರಿ ಹಬ್ಬದ ಎರಡನೇ ದಿನವಾದ ಇಂದು, ಮಾತೆ ಬ್ರಹ್ಮಚಾರಿಣಿಯನ್ನು ಆರಾಧಿಸಲಾಗುತ್ತದೆ. ಈ ಸಂದರ್ಭದಲ್ಲಿ, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಪಂಡಿತ್ ಜಸರಾಜ ಅವರ ಭಾವಪೂರ್ಣ ಗಾಯನವನ್ನು ಹಂಚಿಕೊಳ್ಳುತ್ತ, ಅಪಾರ ಸಂಖ್ಯೆಯ ಭಕ್ತರು ಸಂಗೀತದ ಮುಖೇನ ಹಬ್ಬವನ್ನು ಆಚರಿಸುತ್ತಿದ್ದಾರೆ. ನಾಡಿನ ಜನತೆ ತಮಗೆ ಇಷ್ಟವಾದ ಭಕ್ತಿ ಗೀತೆಯನ್ನು ಹಂಚಿಕೊಂಡಲ್ಲಿ, ಮುಂಬರುವ ದಿನಗಳಲ್ಲಿ ತಾವು ಅವುಗಳಲ್ಲಿ ಕೆಲವನ್ನು ಪೋಸ್ಟ್ ಮಾಡುವುದಾಗಿ ತಿಳಿಸಿದ್ದಾರೆ. ಗದಗಿನ ವೆಂಕಟಾಪುರ ಗ್ರಾಮದ, ಇತಿಹಾಸ ಪ್ರಸಿದ್ಧ ವೆಂಕಟೇಶ್ವರ ದೇವಸ್ಥಾನ, ನಗರದ ತ್ರಿಕೂಟೇಶ್ವರ ದೇವಸ್ಥಾನ, ಬನಶಂಕರಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆಗಳೊಂದಿಗೆ ನವರಾತ್ರಿ ಮಹೋತ್ಸವ ಆರಂಭಗೊಂಡಿದೆ. ಅಕ್ಟೋಬರ್ 2 ವಿಜಯದಶಮಿ ವರೆಗೆ ಹಲವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಚಿಕ್ಕಮಗಳೂರು, ಶೃಂಗೇರಿ ಶಾರದಾ ಪೀಠದಲ್ಲಿ ಆಯೋಜನೆಗೊಂಡಿರುವ ನವರಾತ್ರಿ ಉತ್ಸವದಲ್ಲಿ, ಮೊದಲ ದಿನದಂದು ಶಾರದಾ ದೇವಿಗೆ ಹಂಸವಾಹಿನಿ ಅಲಂಕಾರ ಮಾಡಲಾಯಿತು. ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನ, ಮಲೇನಹಳ್ಳಿಯ ದೇವಿರಮ್ಮ ದೇವಸ್ಥಾನಗಳಲ್ಲಿ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡಲಾಗಿದೆ.

ರಂಭಾಪುರಿ ಮಠದ ವತಿಯಿಂದ, ಈ ಬಾರಿ ಬೀದರ್ ಜಿಲ್ಲೆ ಬಸವ ಕಲ್ಯಾಣ ನಗರದಲ್ಲಿ ದಸರಾ ಮಹೋತ್ಸವ ಆಯೋಜನೆಗೊಂಡಿದೆ.

<><><>

ಮನುಕುಲಕ್ಕೆ ಮಾರಕವಾಗಬಹುದಾದ ತಾಮಸೀ ಭಾವನೆಗಳಿಂದ ಹೊರಬಂದು ಶ್ರೀ ಆದಿಶಕ್ತಿ ದುರ್ಗಾಮಾತೆಯ ಪವಿತ್ರ ಸನ್ನಿಧಾನದಲ್ಲಿ ಸತ್ಯ, ಶುದ್ಧ, ಸಾತ್ವಿಕ, ಬದುಕಿನ ಸಂಕಲ್ಪ ಮಾಡುವುದೇ ನವರಾತ್ರಿ ವೃತಾಚರಣೆಯ ಮೂಲ ಉದ್ದೇಶವಾಗಿದೆ ಎಂದು ಕನ್ನಡಿಗರಾಗಿರುವ ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾದ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾಕ್ಟರ್ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಿಳಿಸಿದ್ದಾರೆ. ಉತ್ತರಪ್ರದೇಶದ ವಾರಾಣಾಸಿ ನಗರದ ಶ್ರೀಕಾಶಿ ಜ್ಞಾನ ಪೀಠದಲ್ಲಿರುವ ಶ್ರೀಚಕ್ರ ಮತ್ತು ಶ್ರೀಆದಿಶಕ್ತಿ ದುರ್ಗಾಮಾತೆಯ ಸನ್ನಿಧಾನದಲ್ಲಿ ಶರನ್ನವರಾತ್ರಿ ಅಂಗವಾಗಿ 10 ದಿನಗಳ ಘಟಸ್ಥಾಪನೆಯ ವಿಶೇಷ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶ್ರೀಆದಿಶಕ್ತಿ ದುರ್ಗಾಮಾತೆಯ ಅರ್ಚನೆ, ಆರಾಧನೆ ಮತ್ತು ನಾಮಸ್ಮರಣೆಗೆ ಮೀಸಲಾದ ನವರಾತ್ರಿ ದಸರಾ ಹಬ್ಬದ ಆಚರಣೆಯು ಕೇವಲ ಸಾಂಕೇತಿಕವಾಗದೇ, ಮನುಷ್ಯ ತನ್ನ ಅಂತರಂಗ ಮತ್ತು ಬಹಿರಂಗ ಶುದ್ಧಿಗೆ ಅತೀ ಅಗತ್ಯವಾದ ಮೌಲ್ಯಗಳ ಚಿಂತನೆ ಮತ್ತು ಅನುಪಾಲನೆಗೆ ತೆರೆದುಕೊಳ್ಳಬೇಕೆಂಬುದೇ ನವರಾತ್ರಿ ಹಬ್ಬದ ಬಹುಮುಖ್ಯ ಆಶಯವಾಗಿದೆ ಎಂದರು.

<><><>

ನವರಾತ್ರಿ ಅಂಗವಾಗಿ ಜಾನಪದ ಲೋಕದಲ್ಲಿ ಒಂದು ತಿಂಗಳು ವಿಶೇಷ ಬೊಂಬೆಗಳ ಪ್ರದರ್ಶನ ಆಯೋಜಿಸಲಾಗಿದ್ದು, ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊಫೇಸರ್ ಹಿ.ಚಿ.ಬೋರಲಿಂಗಯ್ಯ ತಿಳಿಸಿದ್ದಾರೆ. ರಾಮನಗರದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಹಿಂದೂ ಧರ್ಮದಲ್ಲಿ ಬನ್ನಿ ಪೂಜೆಗೆ ಮಹತ್ವದ ಪಾತ್ರವಿರುವ ಹಿನ್ನೆಲೆ, ಜಾನಪದ ಲೋಕದಲ್ಲಿ ವಿಜಯದಶಮಿಯಂದು ಆರತಿ ಮತ್ತು ದೇವರುಗಳ ಮೆರವಣಿಗೆಯೊಂದಿಗೆ ಬನ್ನಿಮರದ ಪೂಜಾ ಕಾರ್ಯಕ್ರಮ ನಡೆಯಲಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.

<><><>